



# ಡೀಪ್‌ಫೇಕ್ ಡಿಟೆಕ್ಷನ್‌ಗೆ ಯೂಟ್ಯೂಬ್ ಆದ್ಯತೆ

**ಡೀಪ್‌ಫೇಕ್ ಇಂದಿನ ಸೋಷಿಯಲ್ ಮೀಡಿಯಾಗಳ ತಲೆನೋವುಗಳಲ್ಲಿ ಪ್ರಮುಖವಾದದ್ದು. ಈ ತಲೆನೋವಿಗೆ ಯೂಟ್ಯೂಬ್ ಮದ್ದನ್ನು ಪರಿಚಯಿಸಿದ್ದು, ಇದನ್ನು ಹೇಗೆ ಬಳಸಬೇಕು ಎಂಬುದನ್ನು ಇಲ್ಲಿ ತಿಳಿಯೋಣ.**

**■ ಶಶಿಕುಮಾರ್ ಸಿ.**



ಸದ್ಬಳಕೆಯ ಹೊರತಾಗಿಯೂ ದುರ್ಬಳಕೆಯಿಂದ ಈಚೆಗೆ ಸೋಷಿಯಲ್ ಮೀಡಿಯಾಗಳಲ್ಲಿ ವಿಡಿಯೊಗಳು ಹೆಚ್ಚೆಚ್ಚು ವೈರಲ್ ಆಗುತ್ತವೆ. ಈ ಪೈಕಿ ಡೀಪ್‌ಫೇಕ್ ತಂತ್ರಜ್ಞಾನದಿಂದ ರಚಿಸಿದ ವಿಡಿಯೊಗಳೇ ಹೆಚ್ಚು. ಅದರಲ್ಲೂ ಯೂಟ್ಯೂಬ್‌ನಂತಹ ದೊಡ್ಡ ವೇದಿಕೆಯಲ್ಲಿ ನೈಜ ಹಾಗೂ ತಿರುಚಿದ ವಿಡಿಯೊಗಳನ್ನು ಗುರುತಿಸುವುದು ಕಷ್ಟ.

ಯೂಟ್ಯೂಬ್ ಅನ್ನೇ ಆದಾಯದ ಮೂಲವನ್ನಾಗಿ, ಹವ್ಯಾಸದ ವೇದಿಕೆಯನ್ನಾಗಿ ಬಳಸಿಕೊಳ್ಳುತ್ತಿರುವವರ ಹಾಗೂ ಟ್ರೋಲರ್‌ಗಳ ಕೈಗೆ ಸಿಲುಕಿ ನಲುಗಿದವರ ವೈಯಕ್ತಿಕ ಮಾಹಿತಿ ಹಾಗೂ ಮುಖಚಹರೆಯನ್ನು ತಿರುಚಿ ಅಶ್ಲೀಲವಾಗಿ ಡೀಪ್‌ಫೇಕ್ ವಿಡಿಯೊಗಳನ್ನು ರಚಿಸಿ ಹರಿಬಿಡಲಾಗುತ್ತಿದೆ. ಅಮಾಯಕರ ನೈತಿಕ ಶಕ್ತಿ ಕುಂದಿಸುವಂತಹ ಕ್ರಿಯೆ ಇದಾಗಿದ್ದು, ಈ ಕೃತ್ಯವನ್ನು ಮೂಲದಲ್ಲೇ ತಡೆಯಲು ಯೂಟ್ಯೂಬ್ ಈಚೆಗೆ ಹೊಸ ಫೀಚರ್ ಪರಿಚಯಿಸಿದೆ. ಅದುವೇ 'ಎಐ ಲೈಕ್‌ನೆಸ್ ಡಿಟೆಕ್ಷನ್ ಟೂಲ್'.

ಹೆಸರೇ ಸೂಚಿಸುವಂತೆ ಈ ಫೀಚರ್, ಅಸಲಿ ಮತ್ತು ನಕಲಿ ವಿಡಿಯೊಗಳನ್ನು ಗುರುತಿಸುತ್ತದೆ. ಈ ಎಐ ಪರಿಕರವು ಯೂಟ್ಯೂಬ್ ವೇದಿಕೆಯಲ್ಲಿ ಸಕ್ರಿಯವಾಗಿರುವವರ ಯಾವ ವಿಡಿಯೊಗಳನ್ನು ಡೀಪ್‌ಫೇಕ್ ಬಳಸಿ ತಿರುಚಲಾಗಿದೆ ಎಂಬುದನ್ನು ಗುರುತಿಸಲು ನೆರವಾಗುತ್ತದೆ. ಅಂದರೆ, ಯಾರಾದರೂ ನಿಮ್ಮ ಧ್ವನಿ ಮಾದರಿ ಅಥವಾ ಮುಖದ ಚಹರೆಯನ್ನು ಬಳಸಿಕೊಂಡು ನಕಲಿ ವಿಡಿಯೊವನ್ನು ರಚಿಸಿದರೆ ಅಥವಾ ಅನುಚಿತವಾಗಿ ಬಳಸಿದರೆ ಈ ಎಐ ಪರಿಕರವು, ಅದನ್ನು ಪತ್ತೆಹಚ್ಚಿ ನಿಮ್ಮನ್ನು ಎಚ್ಚರಿಸುತ್ತದೆ.

ಈ ಫೀಚರ್ ಅಭಿವೃದ್ಧಿಪಡಿಸಿದ ಹೊಸದರಲ್ಲಿ ಯೂಟ್ಯೂಬ್ ಪಾರ್ಟ್‌ನರ್ ಪ್ರೋಗ್ರಾಮ್ (YPP) ಸದಸ್ಯರಿಗೆ ಮಾತ್ರ ಲಭ್ಯವಾಗುವಂತೆ ಬಿಡುಗಡೆ ಮಾಡಲಾಗಿತ್ತು. ಆದರೀಗ ಇದನ್ನು ಸಾರ್ವಜನಿಕರ ಬಳಕೆಗೆ ಮುಕ್ತವಾಗಿಸಲು ಯೂಟ್ಯೂಬ್ ಸಿದ್ಧತೆ ನಡೆಸಿದ್ದು, ಅದನ್ನು ಬಳಸಲು ಬಳಕೆದಾರರು ಆನ್‌ಬೋರ್ಡಿಂಗ್ ಪ್ರಕ್ರಿಯೆಯನ್ನು ಆದಷ್ಟು ತ್ವರಿತವಾಗಿ ಪೂರ್ಣಗೊಳಿಸಬೇಕಿದೆ.

'ಎಐ ಲೈಕ್‌ನೆಸ್ ಡಿಟೆಕ್ಷನ್ ಟೂಲ್' ಬಳಸಲು ಬಳಕೆದಾರರು ಸರಳವಾಗಿರುವ ಮೂರು ಹಂತದ ಪ್ರಕ್ರಿಯೆಯಲ್ಲಿ ಪಾಲ್ಗೊಂಡು, ಅಗತ್ಯ ಮಾಹಿತಿ ಒದಗಿಸಿ ಒಪ್ಪಿಗೆ ನೀಡಬೇಕು.

**ಮೊದಲ ಹಂತ:** ಡೇಟಾ ಪ್ರಕ್ರಿಯೆಗೆ ವೈಯಕ್ತಿಕ ಒಪ್ಪಿಗೆ ಒದಗಿಸುವುದು.

**ಎರಡನೆಯ ಹಂತ:** ಸರ್ಕಾರ ಒದಗಿಸಿದ ಗುರುತಿನ ಚೀಟಿ (ಆಧಾರ್, ವೋಟರ್ ಐಡಿ, ಡ್ರೈವಿಂಗ್ ಲೈಸೆನ್ಸ್) ಅಪ್‌ಲೋಡ್ ಮಾಡುವುದು.

**ಮೂರನೆಯ ಹಂತ:** ಗುರುತಿನ ಪರಿಶೀಲನೆಗೆ ನಿಮ್ಮ ವೈಯಕ್ತಿಕ ಸೆಲ್ಫಿ ವಿಡಿಯೊ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಬೇಕು.

ಯೂಟ್ಯೂಬ್ ಕೋರಿದ ಅಗತ್ಯ ಮಾಹಿತಿಯನ್ನು ಒದಗಿಸಿದ ನಂತರ ಆ ಮಾಹಿತಿಯು ಗೂಗಲ್‌ನ ಸರ್ವರ್‌ಗಳಲ್ಲಿ ಸುರಕ್ಷಿತವಾಗಿ ಸಂಗ್ರಹಿಸಲಾಗುತ್ತದೆ. ಬಳಕೆದಾರರು ಒದಗಿಸಿದ ಮಾಹಿತಿಯ ಪರಿಶೀಲನೆ ಪೂರ್ಣಗೊಂಡ ನಂತರ ಈ ಫೀಚರ್ ಅನ್ನು ನೀವು ಬಳಸಬಹುದಾಗಿದೆ.

## ಫೀಚರ್‌ನ ಕಾರ್ಯವಿಧಾನ ಹೇಗೆ?

ಫೀಚರ್ ಅಥವಾ ಟೂಲ್ ಸಕ್ರಿಯಗೊಂಡ ಬಗ್ಗೆ ಯೂಟ್ಯೂಬ್‌ನಿಂದ ಬಳಕೆದಾರರಿಗೆ ಸಂದೇಶ ರವಾನೆಯಾಗುತ್ತದೆ. ಆ ನಂತರ ಬಳಕೆದಾರರು ಅಥವಾ ಕ್ರಿಯೇಟರ್ಸ್ ತಮ್ಮ ಖಾತೆಯಲ್ಲಿ ಯೂಟ್ಯೂಬ್ ಸ್ಟುಡಿಯೊ ಆಯ್ಕೆಗೆ ಹೋಗಿ, ಅಲ್ಲಿ ಕಾಣುವ ಕಂಟೆಂಟ್ ಐಡಿ ಸೆಕ್ಷನ್ ಕ್ಲಿಕ್ಕಿಸಬೇಕು. ಅದರಡಿ ಕಾಣುವ 'ಎಐ ಲೈಕ್‌ನೆಸ್ ಡಿಟೆಕ್ಷನ್ ಟೂಲ್' ಕ್ಲಿಕ್ಕಿಸಿದರೆ ನಿಮಗೆ ಸಂಬಂಧಿಸಿದಂತೆ ಡೀಪ್‌ಫೇಕ್ ವಿಡಿಯೊ ರಚನೆ ಹಾಗೂ ಈಗಾಗಲೇ ಅಂತಹ ವಿಡಿಯೊಗಳು ರಚನೆಗೊಂಡಿದ್ದರೆ ಅವುಗಳ ಬಗ್ಗೆ ಮಾಹಿತಿ ಅಲ್ಲಿರುತ್ತದೆ. ನಂತರ ಅಗತ್ಯ ಕ್ರಮಗಳನ್ನು ಕೈಗೊಳ್ಳಬಹುದು.

## ಡೀಪ್‌ಫೇಕ್ ವಿಡಿಯೊ ಕಂಡರೆ?

ಈಗಾಗಲೇ ಯೂಟ್ಯೂಬ್ ವೇದಿಕೆಯಲ್ಲಿ ನಿಮ್ಮ ಮುಖ ಚಹರೆ ಹಾಗೂ ಧ್ವನಿ ಮಾದರಿಯ ವಿಡಿಯೊಗಳು ಇರುವುದು ಕಂಡರೆ ಏನು ಮಾಡಬೇಕು ಎನ್ನುವ ಪ್ರಶ್ನೆ ಬಳಕೆದಾರರಲ್ಲಿ ಉದ್ಭವವಾಗುತ್ತದೆ. ಅದಕ್ಕೆ ಉತ್ತರ ಎರಡು ಆಯ್ಕೆ. ಒಂದು ವಿಡಿಯೊ ತೆರವಿಗೆ ಮನವಿ (ರಿಮೂವ್ ರಿಕ್ವೆಸ್ಟ್) ಸಲ್ಲಿಸುವುದು. ಮತ್ತೊಂದು ಆರ್ಕೈವ್ ರಿಕ್ವೆಸ್ಟ್ ಆಯ್ಕೆಯನ್ನು ಆಯ್ದುಕೊಳ್ಳುವುದು. ಈ ಆಯ್ಕೆಯಡಿ ತಿರುಚಿದ ವಿಡಿಯೊ ಅಥವಾ ಧ್ವನಿ ಮಾದರಿಗಳು ಹೆಚ್ಚು ಅಪಾಯಕಾರಿಯಲ್ಲ ಎಂದು ಅನಿಸಿದರೆ, ದಾಖಲೆಯನ್ನು ಇರಿಸಿಕೊಳ್ಳಲು ವಿಡಿಯೊವನ್ನು ಆರ್ಕೈವ್ ಮಾಡಬಹುದು. ನಂತರ ಯೂಟ್ಯೂಬ್ ವಿಡಿಯೊವನ್ನು ಪರಿಶೀಲಿಸಿ, ಅಗತ್ಯ ಕ್ರಮ ವಹಿಸುತ್ತದೆ. ■

## ವಿಶೇಷ ಸೂಚನೆ

'ಎಐ ಲೈಕ್‌ನೆಸ್ ಡಿಟೆಕ್ಷನ್ ಟೂಲ್' ಈ ಉಪಕರಣವು ಇನ್ನೂ ಆರಂಭಿಕ ಹಂತದಲ್ಲಿದೆ. ಟ್ರಯಲ್ ಅಂಡ್ ಎರರ್ ಪ್ರಕ್ರಿಯೆ ನಡೆಸಲಾಗುತ್ತಿದೆ. ಈ ಕಾರಣಕ್ಕಾಗಿ ನಿಮ್ಮ ಸ್ವಂತ ವಿಡಿಯೊಗಳು ಸಹ ಎಐ ಲೈಕ್‌ನೆಸ್ ಡಿಟೆಕ್ಷನ್ ಟೂಲ್‌ನಡಿ ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಯೂಟ್ಯೂಬ್ ಹೇಳಿದೆ. ಟೂಲ್ ಬಳಸುವ ಮೊದಲೇ ಈ ಬಗ್ಗೆ ತಿಳಿದಿದ್ದರೆ ಒಳಿತು. ಇನ್ನು ಈ ಟೂಲ್ ಬಳಕೆಯನ್ನು ನಿಷ್ಕ್ರಿಯಗೊಳಿಸಲು ಮ್ಯಾನೇಜ್ ಟೂಲ್ ವಿಭಾಗಕ್ಕೆ ಭೇಟಿ ನೀಡಿ ಆಫ್ ಮಾಡಿದರೆ ಮುಂದಿನ 24 ಗಂಟೆಗಳ ಒಳಗೆ ನಿಮ್ಮ ವಿಡಿಯೊಗಳ ಡಾಟಾ ಪ್ರಕ್ರಿಯೆಯನ್ನು ಬ್ಯಾಕ್‌ಗ್ರೌಂಡ್‌ನಲ್ಲಿ ಪ್ರೋಸೆಸ್ ಮಾಡುವುದನ್ನು ನಿಲ್ಲಿಸುತ್ತದೆ.